ಇಡೀ ದಿನ, ಇಡೀ ವಾರ, ಇಡೀ ತಿಂಗಳು, ಆಕೆ ಪ್ರೀತಿಯಿಂದ ಹಂಬಲಿಸುತ್ತಿದ್ದುದು ತನ್ನ ಬಾಳ ಸಾಯಂಕಾಲದಲ್ಲಿ ಸಿಗುತ್ತಿದ್ದ ಈ ಬಾಲ್ಯಕ್ಕಾಗಿ, ಆಶೆಯಲ್ಲೂ, ನಿರಾಶೆಯಲ್ಲೂ ಮುದ್ದಾಗಿ ಕಾಣುತ್ತಿದ್ದ ಅಂತುನ ನಗುವಿಗಾಗಿ.

ಜಿಟಿ ಜಿಟಿ ಮಳೆ ಬರುತ್ತಿದ್ದರೂ ಅಂತು ಆ ಮಳೆಯಲ್ಲಿ ನೆನೆಯುತ್ತಾ ಹುಚ್ಚನಂತೆ ತನ್ನ ಎಳೆಯ ಕಾಲುಗಳನ್ನು ದಾರಿಯಲ್ಲಿ ನೀರು ತುಂಬಿದ್ದ ತೋಡುಗಳಲ್ಲಿ ಹಾರಿಸುತ್ತಾ, ನೀರು ಚಿಮ್ಮಿ ಪಿಚಕ್ ಅಂತ ಸದ್ದು ಮಾಡಿದಾಗ ಫಳ್ ಫಳ್ ಅಂತ ನಕ್ಕಿದ್ದು ಇಡೀ ನೇರಳೆಪುರದ ಕಾಡಿನೊಳಗೂ ಕೇಳಿ ಕಾಡೂ ನಕ್ಕಂತಾಯ್ತು. ಹಿಂದಾದರೆ ಕಮಲಜ್ಜಿ, "ಹೇ ಘಟಿಂಗ, ನೀರಿನಲ್ಲಿ ನೆನೀಬೇಡ್ವ, ನಿಂಗೆ ಶೀತ, ಕೆಮ್ಮು ಬಂದ್ರೆ ನಂಗೆ ತಡ್ಕೊಳ್ಳಿಕ್ಕೆ ಆಗುದಿಲ್ಲ" ಎನ್ನುತ್ತಿದ್ದಳು. ಆದರೆ ಯಾವಾಗ ಅವನಿಗೆ ನೆನೆದರೆ ಶೀತ, ಜ್ವರ ಕೆಮ್ಮು ಬರೋದಿಲ್ಲ. ಅವನ ದೇಹ ಪ್ರಕೃತಿಯೇ ಹಾಗೇ ಎನ್ನುವುದು ಗೊತ್ತಾಯಿತೋ ಆವತ್ತಿಂದ "ಅವ ನೆನೀಲಿ, ಆಟ ಆಡಲಿ ಪಾಪ" ಅಂತ ಸುಮ್ಮನಾಗುತ್ತಿದ್ದಳು. ಅವಳಿಗೆ ತನ್ನ ಮುದಿಗಣ್ಣಲ್ಲಿ ಬಾಲ್ಯದಲ್ಲಿ ತಾನೂ ಕಾಡ ತೊರೆಯಲ್ಲಿ ಕಪ್ಪೆಗಳನ್ನು ನೋಡಿ ಬೆರಗಾದದ್ದು, ಮಳೆಯನ್ನು ಜೀವದಂತೆ ಪ್ರೀತಿಸಿ ಮಳೆಯಲ್ಲೇ ನೆನೆದು, ಚಂಡಿಯಾಗಿ ಸುಖಪಡುತ್ತಿದ್ದುದೆಲ್ಲಾ ನೆನಪಾಗುತ್ತಿತ್ತು. ಮಕ್ಕಳು ಬಾಲ್ಯದಲ್ಲಿ ಮಳೆಯ ಎಲ್ಲ ಸುಖಗಳನ್ನು ಅನುಭವಿಸಬೇಕು. ಯೌವನದಲ್ಲಿ, ಮುಪ್ಪಿನಲ್ಲಿ ಮಳೆ ಬಂದಾಗ ಅದಕ್ಕೆ ಮತ್ತೆ ಬಾಲ್ಯ ಕೊಡುವ ತಾಕತ್ತಿರುತ್ತದೆ. ಮಳೆ ಅಂದ್ರೆ ಬಾಲ್ಯದ ದೊಡ್ಡದೊಂದು ಬೆರಗು ಎಂದು ಗಾಢವಾಗಿ ನಂಬಿದ್ದ ಕಮಲಜ್ಜಿ ಅಂತುನನ್ನು ಮಳೆಯಲ್ಲಿ ಆಡಲು ಪ್ರೇರೇಪಿಸುತ್ತಿದ್ದಳು. ಅಗತ್ಯಬಿದ್ದರೆ ತಾನೂ ಅವನ ಜೊತೆಯಲ್ಲಿ ಕಷ್ಟವಾದರೂ ಇಷ್ಟಪಟ್ಟು ನೆನೆಯುತ್ತಿದ್ದಳು. ಮಳೆಗೆ ನೆನೆದುಕೊಂಡು ಬರುತ್ತಿದ್ದ ಅಂತು ಈಗ ಕಮಲಜ್ಜಿಗೆ ಹತ್ತಿರಾದ. ಮುಖದ ಮೇಲೆಲ್ಲಾ ಮೆತ್ತಿಕೊಂಡ ಹನಿಗಳಿಂದ ಹೊಳೆಯುತ್ತ ಗಲ್ಲ ಅಲ್ಲಾಡಿಸಿ, ಕಮಲಜ್ಜಿಯನ್ನು ನೋಡಿದ್ದೇ,

"ಕಮ್ಲಜ್ಜಿ, ನಾನು ಬರ್ತಾ ಒಂದು ಏಡಿ ನೋಡಿದೆ, ಭಾರೀ ದೊಡ್ಡಿತ್ತು. ಕಲ್ಲಿನ ನಡುವೆ ಕತ್ತರಿಯಂತೆ ಚೂಪಾಗಿ ಕಾಣ್ತಿತ್ತು. ಹಳ್ಳದಲ್ಲಿ ನಾ ಕಾಲಿಟ್ಟ ಸದ್ದಾಗಿದ್ದೇ ಅದು ಕಲ್ಲಿನ ನಡುವೆ ಪಡ್ಚಾ. ಹಾ ಹಾ ನೋಡಿದ್ಯಾ. ನನ್ನ ನೋಡಿದ್ರೆ ಅದ್ಕೂ ಹೆದ್ರಿಕೆ. ಎಲ್ಲಾ ಪ್ರಾಣಿ ಪಕ್ಷಿಗಳಿಗೂ ಅಷ್ಟೆ. ಅವಕ್ಕೆ ಗೊತ್ತು ನಾನು ಜೋರಂತ." ಅಂತು ತನ್ನ ಸ್ವ ಪ್ರಶಂಸೆ ಮಾಡಿದ್ದೇ, ಕಮಲಜ್ಜಿ ಬೊಚ್ಚುಬಾಯಲ್ಲಿ,

"ಹೌದಪ್ಪ ಹೌದು. ನಿನ್ನ ಕಂಡ್ರೆ ಎಲ್ರಿಗೂ ಎಷ್ಟೊಂದು ಭಯ ಭಕ್ತಿ ಮಾರಾಯ" ಎಂದಳು ಜೋರಾಗಿ ನಕ್ಕು. ಅಂತು ಇನ್ನಷ್ಟು ಉಬ್ಬಿ ಹೋದ. ಖಂಡಾಪಟ್ಟೆ ಮೀನು ಹಿಡಯುವ ಒಂದು ಹಕ್ಕಿ ಉಂಟೆಂದೂ ಅದನ್ನೊಮ್ಮೆ ನಿಂಗೆ ಕಾಡಲ್ಲೇ ತೋರಿಸಿ ಆ ಮೇಲೆ ಅದ್ರ ಕತೆ ಹೇಳ್ತೇನೆಂದೂ ಮೈ ಕೊಡವುತ್ತಾ ಹೇಳಿ, ಸೀದಾ ಒಳಜಗುಲಿಗೆ ಹೋಗಿ ಕೂತ ಅಂತು, "ಇಲ್ ನೋಡಜ್ಜಿ" ಅಂತಂದು ಜೇಬಿನಲ್ಲಿ ಜೋಪಾನವಾಗಿರಿಸಿದ್ದ ಹಳೆಯ ಕೈಗಡಿಯಾರವೊಂದನ್ನು ಕಮಲಜ್ಜಿಯ ಕಣ್ಣಮುಂದೆ ಎತ್ತಿಹಿಡಿದ. ಬೆಳ್ಳಿಯ ಬಣ್ಣದಿಂದ ಮಿಂಚುತ್ತಿದ್ದ ಆ ವಾಚನ್ನು ನೋಡಿದ್ದೇ ಕಮಲಜ್ಜಿಯ ಕಣ್ಣು ಸೂಕ್ಷ್ಮವಾಯಿತು, ಹೊಳಪಾಯಿತು. ಹತ್ತಿರ ಬಂದು ಮತ್ತೆ ಆ ವಾಚನ್ನು ಮೂಕವಿಸ್ಮಿತಳಾಗಿ ನೋಡಿದಳು. ಅವಳಿಗೆ ಏನೇನೋ ಅನ್ನಿಸತೊಡಗಿತು.

"ಏ ಯಾರದ್ದೋ ಈ ವಾಚು? ಯಾರು ಕೊಟ್ರು ನಿಂಗೆ? ಎಲ್ಲಿಂದ ಬಂತು" ಕಮಲಜ್ಜಿ ಅಚ್ಚರಿಯಿಂದ ಕೇಳಿದಳು.

"ಮನೇಲಿತ್ತು, ಚಂದ ಉಂಟಲ್ವಾ" ಎಂದು ಅಷ್ಟು ದೊಡ್ಡದಾಗಿದ್ದ ಆ ವಾಚನ್ನು ತನ್ನ ಪುಟ್ಟ ಕೈಗೆ ಹಾಕಿಕೊಳ್ಳಲು ಅಂತು ಚಡಪಡಿಸಿದ.

"ಏ ಯಾರು ಕೊಟ್ಟದ್ದು ನಿಂಗೆ? ಎಲ್ಲಿಂದ ಬಂತು ನಿಮ್ಮನೆಗೆ?" ಕಮಲಜ್ಜಿ ಇನ್ನೂ ಆಶ್ಚರ್ಯ